**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ, ಶ್ರೀ ಯು.ಬಿ. ವೆಂಕಟೇಶ್, ಶ್ರೀ ಮಂಜುನಾಥ ಭಂಡಾರಿ, ಡಾ. ಡಿ. ತಿಮ್ಮಯ್ಯ, ಶ್ರೀ ಎಂ. ನಾಗರಾಜು ಹಾಗೂ ಶ್ರೀಮತಿ ಉಮಾಶ್ರೀ ಇವರ ನಿಯಮ-72ರ ಗಮನ ಸೆಳೆಯುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

**ವಿಷಯ:**

ಕಲಬುರಗಿಯಲ್ಲಿ ದಿ|| ಡಾ.ಚನ್ನಣ್ಣ ವಾಲೀಕಾರ ಅವರ ಹೆಸರಿನಿಂದ ಪ್ರತಿಷ್ಠಾನ ಸ್ಥಾಪಿಸಲು ಮನವಿ, ಕಲಬುರಗಿ ಜಿಲ್ಲೆಯ ಗ್ರಾಮೀಣ ಭಾಗದ ಹಿಂದುಳಿದ, ಬಡ ಕುಟುಂಬದ ಡಾ. ಚನ್ನಣ್ಣ ವಾಲೀಕಾರ, ಕನ್ನಡ ಸಾಹಿತ್ಯ ಕ್ಷೇತ್ರ ತಮ್ಮದೇ ಅಪರೂಪದ ಕೊಡುಗೆ ನೀಡಿದವರು. 70ರಷ್ಟು ಗ್ರಂಥಗಳ ಪ್ರಕಟಣೆಯೊಂದಿಗೆ ಶೋಷಿತರ ಪರವಾಗಿ, ಶೋಷಣೆಯ ವಿರುದ್ಧ ಬದುಕುನುದ್ದಕ್ಕೂ ಹೋರಾಟ ಮಾಡಿದವರು. ಈ ಕಾರಣಕ್ಕಾಗಿ ಬಂಡಾಯ ಸಂಘಟನೆ ಆರಂಭಿಸಿದವರು. 'ಪ್ರೋಮಾ ಪ್ರೋಮ' ಎಂಬ ಮಹಾಕಾವ್ಯ ರಚಿಸಿದವರು. ಹಾಗೆಯೇ ರಾಯಚೂರಿನಲ್ಲಿ ದಿ. ಶಾಂತರಸರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಲು ಕೋರಿಕೆ.

ರಾಯಚೂರಿನಲ್ಲಿ ಕನ್ನಡವನ್ನು ಉಳಿಸಿ, ಬೆಳೆಸುವಲ್ಲಿ ಶಾಂತರಸರ ಶ್ರಮ ಅನನ್ಯ, ರಾಯಚೂರು ಜಿಲ್ಲೆಯಲ್ಲಿ ಸಾಹಿತ್ಯ, ಸಂಘಟನೆ, ಸಾಹಿತ್ಯ ಕ್ಷೇತ್ರಕ್ಕೆ ಅವರ ಕೊಡುಗೆ ಅನುಪಮ. ಕವಿ, ಕಥೆಗಾರ, ಹೋರಾಟಗಾರ, ಪ್ರಗತಿಪರ ಚಿಂತಕ, ಸಮಾನತೆಯ ಪ್ರತಿಪಾದಕರು., ಕನ್ನಡಪರ ಹೋರಾಟಗಾರರಿಗೆ, ಲೇಖಕರಿಗೆ ಪ್ರೇರಕರು, ಕಲಬುರಗಿಯಲ್ಲಿ ದಿ.ಚನ್ನಣ್ಣ ವಾಲೀಕಾರ ಮತ್ತು ರಾಯಚೂರಿನಲ್ಲಿ ದಿ. ಶಾಂತರಸರ ಹೆಸರಿನಲ್ಲಿ ಪ್ರತಿಷ್ಠಾನ ಆರಂಭಿಸಲು ತಮ್ಮಲ್ಲಿ ಒತ್ತಾಯಪೂರ್ವಕ ವಿನಂತಿ.

**ಉತ್ತರ:**

ನಾಡಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿರುವ ಮಹನೀಯರ ಹೆಸರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ 25 ಟ್ರಸ್ಟ್/ಪ್ರತಿಷ್ಠಾನಗಳು ಕಾರ್ಯನಿರ್ವಹಿಸುತ್ತಿವೆ. ಈ ಪ್ರತಿಷ್ಠಾನಗಳ ಮೂಲಕ ವಿಚಾರ ಸಂಕಿರಣ, ಪುಸ್ತಕಗಳ ಪ್ರಕಟಣೆ, ಕವಿಗೋಷ್ಠಿ ಮುಂತಾದ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರಲಾಗುತ್ತಿದೆ.

SLNo 711
152284
R=72

ದಿವಂಗತ ಡಾ. ಚನ್ನಣ್ಣ ವಾಲೀಕಾರ ಇವರು 1943ರ ಏಪ್ರಿಲ್ 6 ರಂದು ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಶಂಕರವಾಡ ಗ್ರಾಮದಲ್ಲಿ ಜನಿಸಿದ್ದು, ಇವರು ಕವಿ, ವಿಮರ್ಶಕ, ಸಂಶೋಧಕ, ವಿದ್ವಾಂಸ, ನಾಟಕಕಾರ, ಅಧ್ಯಾಪಕ, ಪ್ರವಚಕ, ಕಾದಂಬರಿಗಾರ ಮತ್ತು ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿ, ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುತ್ತಾರೆ ಹಾಗೂ ಕನ್ನಡದ ಗಜಲ್ ಕವಿ ಎಂದೇ ಪ್ರಸಿದ್ಧರಾದ ಡಾ. ಶಾಂತರಸ ಇವರು ಹಲವಾರು ಸಾಹಿತ್ಯ ಕೃತಿಗಳನ್ನು ರಚಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುತ್ತಾರೆ.

ದಿವಂಗತ ಡಾ. ಚನ್ನಣ್ಣ ವಾಲೀಕಾರ ಹಾಗೂ ರಾಯಚೂರಿನ ದಿವಂಗತ ಶಾಂತರಸ ಇವರುಗಳ ಹೆಸರುಗಳಲ್ಲಿ ಟ್ರಸ್ಟ್ ಮತ್ತು ಪ್ರತಿಷ್ಠಾನ ಸ್ಥಾಪಿಸುವ ಬಗ್ಗೆ ಮನವಿಗಳು ಸ್ವೀಕೃತವಾಗಿದ್ದು, ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು.

ಸಂಖ್ಯೆ: ಕಸಂವಾ 32 ಕವಿಸ 2024.

(ಶಿವರಾಜ ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.